# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ

## ಕೇಂದ್ರ ಕಛೇರಿ : ಸಂಚಾರ ಇಲಾಖೆ : ಬೆಂಗಳೂರು

153

ಸಂಖ್ಯೆ:ಕರಾಸಾ/ಕೇಕ/ಸಂ/ಕಾ/ಸಾ/೭-23/ 2369/14-15 ದಿನಾಂಕ: 30/07/2014.

## ಸುತ್ತೋಲೆ ಸಂಖ್ಯೆ : 1236

(ಸಂಚಾರ ಇಲಾಖೆಯಿಂದ ಹೊರಡಿಸಲಾಗಿದೆ)

ವಿಷಯ: ಚಾಲಕರು, ಚಾಲಕ ಕಂ ನಿರ್ವಾಹಕರು ಮತ್ತು ನಿರ್ವಾಹಕರು ಕರ್ತವ್ಯದ ಮೇಲೆ ಇದ್ದಾಗ ಅವರ ಬಳಿ ಇರಬೇಕಾದ ವೈಯಕ್ತಿಕ ಹಣದ ಬಗ್ಗೆ.

ಉಲ್ಲೇಖ: ಸುತ್ತೋಲೆ ಸಂಖ್ಯೆ 757/1999, ಕರಾಸಾ/ಕೇಕ/ಸಂ/ಕಾ/6677, ದಿನಾಂಕ:08/01/1999.

*********

ಉಲ್ಲೇಖಿತ ಸುತ್ತೋಲೆ ಸಂಖ್ಯೆ 757/1999ರಲ್ಲಿ ಚಾಲಕರು, ಚಾಲಕ ಕಂ ನಿರ್ವಾಹಕರು ಮತ್ತು ನಿರ್ವಾಹಕರು ತಮ್ಮ ಕರ್ತವ್ಯದ ಮೇಲೆ ಇರುವಾಗ ಹೊಂದಿರಬಹುದಾದ ಸ್ವಂತ ಹಣದ ಬಗ್ಗೆ ನಿರ್ದೇಶನಗಳನ್ನು ನೀಡಲಾಗಿತ್ತು. ಪ್ರಸ್ತುತ ಪರಿಸ್ಥಿತಿಯನ್ನು ಪರಿಶೀಲಿಸಿ ನಿಗದಿಪಡಿಸಲಾಗಿರುವ ಸ್ವಂತ ಹಣವನ್ನು ಹೆಚ್ಚಿಸಿ ಕೆಳಕಂಡಂತೆ ಪರಿಷ್ಕರಿಸಲಾಗಿದೆ.

| ಕ್ರ.ಸಂ | ಮಾದರಿ | ಹೊಂದಿರಬಹುದಾದ ಹಣ(ರೂ. ಗಳಲ್ಲಿ) |
|---|---|---|
| 1 | ರಾಜ್ಯ ಮತ್ತು ಅಂತರ ರಾಜ್ಯದಲ್ಲಿನ Day Out ಅನುಸೂಚಿಗಳಲ್ಲಿ ಕಾರ್ಯ ನಿರ್ವಹಿಸುವ ಚಾಲಕ, ಚಾಲಕ ಕಂ ನಿರ್ವಾಹಕ & ನಿರ್ವಾಹಕರು | 100/- |
| 2 | ರಾಜ್ಯದಲ್ಲಿನ Night Out/Night Service ಅನುಸೂಚಿಗಳಲ್ಲಿ ಕಾರ್ಯ ನಿರ್ವಹಿಸುವ ಚಾಲಕ, ಚಾಲಕ ಕಂ ನಿರ್ವಾಹಕ & ನಿರ್ವಾಹಕರು | 200/- |
| 3 | ಅಂತರ ರಾಜ್ಯದಲ್ಲಿನ Night Out/Night Service ಅನುಸೂಚಿಗಳಲ್ಲಿ ಕಾರ್ಯ ನಿರ್ವಹಿಸುವ ಚಾಲಕ, ಚಾಲಕ ಕಂ ನಿರ್ವಾಹಕ & ನಿರ್ವಾಹಕರು | 300/- |

ಚಾಲಕ, ಚಾಲಕ ಕಂ ನಿರ್ವಾಹಕ ಮತ್ತು ನಿರ್ವಾಹಕರು ಕರ್ತವ್ಯದ ಮೇಲೆ ಹೋಗುವಾಗ ಅವರು ಕಾರ್ಯ ನಿರ್ವಹಿಸುವ ಅನುಸೂಚಿಗಳ ಪ್ರಕಾರ ನಿಗಧಿಪಡಿಸಿರುವ ಮೊತ್ತದವರೆಗೆ ಸ್ವಂತ ಹಣವನ್ನು ತೆಗೆದುಕೊಂಡು ಹೋಗಬಹುದು. ಅಂತಹ ಹಣವನ್ನು ಮಾರ್ಗಪತ್ರದಲ್ಲಿ ನಮೂದಿಸಿ ಸಹಿ ಮಾಡಿರಬೇಕು. ಅದೇ ರೀತಿ ಚಾಲಕ, ಚಾಲಕ ಕಂ ನಿರ್ವಾಹಕ & ನಿರ್ವಾಹಕರು ವಿಶೇಷ ಸಂದರ್ಭಗಳಲ್ಲಿ ಮೇಲೆ ನಿಗದಿಪಡಿಸಿರುವ ಮೊತ್ತಕ್ಕಿಂತ ಹೆಚ್ಚಿನ ಹಣವನ್ನು ತೆಗೆದುಕೊಂಡು ಹೋಗಬೇಕಾದ ಸಂದರ್ಭಗಳಲ್ಲಿ ಅಂತಹ ಮೊತ್ತವನ್ನು ಮಾರ್ಗ ಪತ್ರದ ನಿಗದಿತ ಕಾಲಂನಲ್ಲಿ ಘಟಕ ಅಥವಾ ಬಸ್ ನಿಲ್ದಾಣದ ಸಹಾಯಕ ಸಂಚಾರ ನಿರೀಕ್ಷಕ ಹುದ್ದೆಗಿಂತ ಕಡಿಮೆ ಇಲ್ಲದ ಸಂಚಾರ ಮೇಲ್ವಿಚಾರಕರಿಂದ ಅಥವಾ ಬಸ್ ನಿಲ್ದಾಣದ ಅಥವಾ ಘಟಕದ ಅಧಿಕಾರಿಗಳಿಂದ ಕಾರಣ ಸಮೇತ ದೃಢೀಕರಣ ಮಾಡಿಸಿಕೊಳ್ಳಬೇಕು. ಮೊತ್ತವನ್ನು ಅಂಕಿ ಹಾಗೂ ಅಕ್ಷರಗಳೆರಡರಲ್ಲಿಯೂ ನಮೂದಿಸಬೇಕು. ಇದಕ್ಕೆ ಚಾಲಕ/ಚಾಲಕ ಕಂ ನಿರ್ವಾಹಕ/ನಿರ್ವಾಹಕರು ಸಹಿ ಹಾಕಬೇಕು, ದೃಢೀಕರಣ ಮಾಡಿದ ಅಧಿಕಾರಿ/ಮೇಲ್ವಿಚಾರಕರು ಸಹಿ ಮಾಡಿ ತಮ್ಮ ಹೆಸರು, ಹುದ್ದೆ, ದಿನಾಂಕವನ್ನು ನಮೂದಿಸಬೇಕು.

...2

152

ಚಾಲಕ, ಚಾಲಕ ಕಂ ನಿರ್ವಾಹಕ & ನಿರ್ವಾಹಕರು ತಮ್ಮ ಸ್ವಂತ ಹಣವನ್ನು ಸಂಸ್ಥೆಯ ಸಾರಿಗೆ ಹಣದೊಂದಿಗೆ ಕೂಡಿಸದೆ ಪ್ರತ್ಯೇಕವಾಗಿ ಇಟ್ಟುಕೊಳ್ಳಬೇಕು. ತಪಾಸಣೆ ಅಧಿಕಾರಿಗಳು ಕೇಳಿದಾಗ ಅದನ್ನು ತೋರಿಸಬೇಕು.

ನಿರ್ವಾಹಕ ಮತ್ತು ಚಾಲಕ ಕಂ ನಿರ್ವಾಹಕರ ಬಳಿ ಸ್ವಂತ ಹಣವು ನಮೂದಿಸಿರುವುದಕ್ಕಿಂತಲೂ ಹೆಚ್ಚಿಗೆ ಇದ್ದದ್ದು ಕಂಡು ಬಂದಲ್ಲಿ ಅದು ಶಿಕ್ಷಾರ್ಹ ಅಪರಾಧವಾಗುವುದು. ತಪಾಸಣಾಧಿಕಾರಿಗಳು ನಿರ್ವಾಹಕರ ವೇ ಬಿಲ್ ಮೇಲೆ ಸೂಕ್ತ ಷರಾ ಬರೆದು ಅದನ್ನು ಸಂಸ್ಥೆಗೆ ಜಮಾ ಮಾಡಲು ತಿಳಿಸಿ ನಿರ್ವಾಹಕರಿಗೆ ಅಪಾದನಾ ಪತ್ರವನ್ನು ನೀಡಿ ಮೇಲಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ವರದಿಯನ್ನು ಕಳುಹಿಸಬೇಕು.

ಅದೇ ರೀತಿ ಚಾಲಕರ ಬಳಿ ಸ್ವಂತ ಹಣವು ನಮೂದಿಸಲ್ಪಟ್ಟ ಹಣಕ್ಕಿಂತ ಹೆಚ್ಚಾಗಿ ಇದ್ದದ್ದು ಕಂಡುಬಂದರೆ ಅದು ಶಿಕ್ಷಾರ್ಹ ಅಪರಾಧವಾಗುವುದು. ತಪಾಸಣಾಧಿಕಾರಿಗಳು ಆ ಹಣವನ್ನು ನಿರ್ವಾಹಕರಿಗೆ ಕೊಡಿಸಿ, ಘಟಕದಲ್ಲಿ ಜಮಾ ಮಾಡುವಂತೆ ತಿಳಿಸಿ ಚಾಲಕರ ಲಾಗ್ ಶೀಟ್ ಮತ್ತು ನಿರ್ವಾಹಕರ ವೇ ಬಿಲ್ ಮೇಲೆ ಸಂಕ್ಷಿಪ್ತವಾಗಿ ಷರಾ ಬರೆದು ಚಾಲಕರಿಗೆ ಅಪಾದನಾ ಪತ್ರವನ್ನು ನೀಡಿ ಮೇಲಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ವರದಿಯನ್ನು ಕಳುಹಿಸಬೇಕು.

ಯಾವುದೇ ಕಾರಣಕ್ಕೂ ನಿರ್ವಾಹಕರ ವೇ ಬಿಲ್‌ನಲ್ಲಿನ ಕಾಲಂಅನ್ನು ಖಾಲಿ ಬಿಡಬಾರದು. ತಪಾಸಣೆ ಸಮಯದಲ್ಲಿ ಸದರಿ ಕಾಲಂಗಳು ಖಾಲಿಯಿದ್ದಲ್ಲಿ ಚಾಲಕ, ಚಾಲಕ ಕಂ ನಿರ್ವಾಹಕ & ನಿರ್ವಾಹಕರ ಬಳಿ ಸ್ವಂತ ಹಣ ಇಲ್ಲವೆಂದು ಪರಿಗಣಿಸಿ ಸೂಕ್ತ ಷರಾ ಬರೆದು ಸಹಿ ಮಾಡುವುದು.

ಚಾಲಕ, ನಿರ್ವಾಹಕ ಮತ್ತು ಚಾಲಕ ಕಂ ನಿರ್ವಾಹಕರು ಕರ್ತವ್ಯದ ಮೇಲೆ ಇರುವಾಗ ನಿಗಧಿಪಡಿಸಿರುವ/ದೃಢೀಕರಿಸಿರುವ ಮೊತ್ತಕ್ಕಿಂತ ಹೆಚ್ಚಿನ ಹಣವನ್ನು ಹೊಂದಿದ್ದರೆ ಸಂಸ್ಥೆಯ 1971ನೇ ನಡತೆ ಮತ್ತು ಶಿಸ್ತಿನ ನಿಯಮಾವಳಿ 17 ಮತ್ತು 18ನೇ ಪ್ರಕಾರ ದುರ್ನಡತೆ ಎಂದು ಪರಿಗಣಿಸಿ ಸೂಕ್ತ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುವುದು.

ಸುತ್ತೋಲೆ ಸಂಖ್ಯೆ 757/1999, ದಿನಾಂಕ: 08/01/1999ರಲ್ಲಿನ ನಿರ್ದೇಶನಗಳನ್ನು ಹಿಂಪಡೆಯಲಾಗಿದೆ.

ಸುತ್ತೋಲೆಯ ಸೂಚನೆಗಳು **01-09-2014**ರಿಂದ ಜಾರಿಗೆ ಬರುತ್ತವೆ. ಸುತ್ತೋಲೆ ಸ್ವೀಕರಿಸಿದಕ್ಕೆ ಸ್ವೀಕೃತಿ ಮತ್ತು ಅನುಸರಣಾ ವರದಿ ನೀಡುವುದು.

ವ್ಯವಸ್ಥಾಪಕ ನಿರ್ದೇಶಕರು
ಕರಾರಾಸಾ ನಿಗಮ

ಪ್ರತಿಯನ್ನು :
ವ್ಯವಸ್ಥಾಪಕ ನಿರ್ದೇಶಕರು, ಬೆಮಸಾಸಂ/ವಾಕರಸಾಸಂ/ಈಕರಸಾಸಂ ರವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.
ಎಲ್ಲಾ ವಿಭಾಗ ನಿಯಂತ್ರಣಾಧಿಕಾರಿಗಳು, ಕರಾರಸಾನಿರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ
ಎಲ್ಲಾ ಇಲಾಖಾ ಮುಖ್ಯಸ್ಥರು, ಕರಾರಸಾನಿ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
ಹಿರಿಯ/ಆಪ್ತ ಕಾರ್ಯದರ್ಶಿ, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಭ:ಜಾ)/ ನಿರ್ದೇಶಕರು(ಸಿ:ಪ)/ ಕರಾರಸಾ ನಿಗಮ ರವರ ಮಾಹಿತಿಗಾಗಿ ಕಳುಹಿಸಲಾಗಿದೆ.